ಕರ್ನಾಟಕ ವಿಧಾನ ಸಭೆ

ಗುರುವಾರ, ದಿನಾಂಕ ೮ನೇ ಮಾರ್ಚ್ ೧೯೮೪

ವಿಧಾನ ಸಭೆಯು ವಿಧಾನಸೌಧದ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ಗೃಹ ನಿವೇಶನಗಳ ವಿತರಣೆ

ಳಿಗೆ (ಶಿರಸಿ) ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

(ಶ್ರೀ ಬಿ.ಜಿ. ಬಣಕಾರ್‌ರವರ ಪರವಾಗಿ ಶ್ರೀ ಬಿ. ಬೈರಪ್ಪಾಜಿಯವರು ಕೇಳಿದರು)

(ಆ) ೧೯೮೩-೮೪ನೇ ಸಾಲಿನಲ್ಲಿ ಎಷ್ಟು ಜನ ನಿವೇಶನ ರಹಿತರನ್ನೂ ಗೊತ್ತುಪಡಿಸಲು ಗುರಿ ಹೊಂದಲಾಗಿತ್ತು?

(ಆ) ೧-೪-೮೩ರಿಂದ ೩೧-೧೨-೮೩ರ ವರೆಗೆ ರಾಜ್ಯದಲ್ಲಿ ನಿವೇಶ ರಹಿತರಿಗೆ ಕೊಟ್ಟಿರುವ ನಿವೇಶನಗಳೆಷ್ಟು ?

(ಇ) ಈ ಬಗ್ಗೆ ರಾಜ್ಯದಲ್ಲಿ ವಿವಿಧ ಹಂತದಲ್ಲಿರುವ ಭೂ ಸ್ವಾಧೀನ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಎ. ಲಕ್ಷ್ಮೀ ಸಾಗರ್ (ಮಾನ್ಯ ವಸತಿ ಮಂತ್ರಿಗಳು).—

ಆ) ೭೫,೦೦೦ ನಿವೇಶನಗಳು.

ಆ) ೫೭,೨೫೭ ನಿವೇಶನಗಳು.

ಇ) ೩,೫೫೨ ಪ್ರಕರಣಗಳು.

ಶ್ರೀ ಬಿ. ಬೈರಪ್ಪಾಜಿ.—ಅಧ್ಯಕ್ಷರೇ, ತಾವು ಕೊಟ್ಟಿರತಕ್ಕ ಅಂಕಿ ಸಂಖ್ಯೆಗಳನ್ನು ಹಿಂದಿನ ಸರ್ಕಾರ ಕೊಟ್ಟಿರತಕ್ಕ ಅಂಕಿ ಸಂಖ್ಯೆಗೆ ಹೋಲಿಸಿದರೆ ಬಹಳ ಕಡಿಮೆ ಪ್ರಮಾಣದಲ್ಲಿ ಸೈಟುಗಳನ್ನು ಹಂಚಿದ್ದಿರಿ, ಮತ್ತು ಭೂ ಸ್ವಾಧೀನ ಪ್ರಕರಣಗಳು ಬಹಳ ಮಂದಗತಿಯಲ್ಲಿ ಕೆಲಸ ನಡೆಯುತ್ತಿವೆ. ಸರಿಯಾದ ರೀತಿಯಲ್ಲಿ ಕಾಲಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಮನೆ ಕಟ್ಟತಕ್ಕಂಥಾ ಅನೇಕ ಜನರಿಗೆ ತೊಂದರೆಯಾಗಿದೆ ಬಡವರಿಗೆ ಸೈಟುಗಳನ್ನು ಹಂಚುವುದರಲ್ಲಿ ವಿಳಂಬವಾಗಿದೆ.

ಅಧ್ಯಕ್ಷರು.—ಸೈಟುಗಳ ಹಂಚುವಿಕೆ ಕೂಡ ಕಡಿಮೆಯಾಗುತ್ತಾ ಹೋಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲನೆ ಪ್ರಶ್ನೆಗೆ ಹಂಚಿರತಕ್ಕ ನಿವೇಶನಗಳು ಕಡಿಮೆ ಎಂದು ಹೇಳಿದ್ದಾರೆ. ನಾವು ಕೊಟ್ಟಿರುವುದು ಡಿಸೆಂಬರ್ ಕೊನೆಯವರೆಗೆ ಇನ್ನು ಮೂರು ತಿಂಗಳು ಇದೆ. ಹೋದವರ್ಷ ಜಾಸ್ತಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಒಟ್ಟು ೩೩೩೨ ಕೇಸುಗಳ ಪೈಕಿ ೭೩೬ ಕೇಸುಗಳು ಹೈಕೋರ್ಟಿನಲ್ಲಿವೆ ೬೮ ಕೇಸುಗಳು ಸಬೊರ್ಡಿನೇಟ್ ಕೋರ್ಟಿನಲ್ಲಿವೆ, ಇವುಗಳನೆಲ್ಲಾ ಪಟ್ಟಿ ಮಾಡಿ ಬೇಗ ಇತ್ಯರ್ಥ ಮಾಡಬೇಕೆಂದು ಹೈಕೋರ್ಟಿಗೆ ಪತ್ರ ಬರೆಯುತ್ತೇವೆ. ಅವರು ಅವುಗಳನ್ನು ಬೇಗ ಇತ್ಯರ್ಥ ಮಾಡುತ್ತಾರೆ ಎನ್ನತಕ್ಕ ಆಶಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಕೋರ್ಟಿನಲ್ಲಿ ಸ್ಟೇ ಆರ್ಡರ್ ಗೆ ಪರ್ಷಗಳಿಗೂ ಪೇಲ್ಪಟ್ಟುವುಗಳಿವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಸಂಬಂಧಪಟ್ಟ ಹಾಗೆ ಅಡ್ವೋಕೇಟ್ ಜನರಲ್ ಅವರಿಗೆ ಕಾಗದ ಬರೆದು ಈ ವಿಚಾರದಲ್ಲಿ ಹೈಕೋರ್ಟಿಗೆ ಮೂವ್ ಮಾಡಿ ಈ ಕೇಸುಗಳನ್ನು ಬೇಗ ತೆಗೆದು ಕೊಳ್ಳಬೇಕು, ಸ್ಟೇ ಕೊಟ್ಟಿರತಕ್ಕ ಕೇಸುಗಳಿಗೆ ತಡೆಯಾಜ್ಞೆಯನ್ನು ತೆರವು ಮಾಡಬೇಕು ಎಂದು ಕಾಗದವನ್ನು ಬರೆದಿದ್ದೇವೆ.

ಶ್ರೀ ಸಿ. ದೊಡ್ಡ ಬೋರೇಗೌಡ.—ದೊಡ್ಡ ದೊಡ್ಡ ಜಮೀನುಗಳವರನ್ನು ಬಿಟ್ಟು ೨–೩–೪ ಕುಂಟೆ ಹೊಂದಿರತಕ್ಕವರ ಜಮೀನು ಸ್ವಾಧೀನ ಪಡಿಸಿಕೊಂಡಿರತಕ್ಕ ಪ್ರಸಂಗ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಜಿ. ಬಸಪ್ಪ.—ಅಧ್ಯಕ್ಷರೇ, ನನ್ನದೊಂದು ಸಲಹೆ ಊರಿನ ಭಾಗದಲ್ಲಿರುವ ಜಮೀನು ಗಳನ್ನು ಯಾರಾದರೂ ಬಿಟ್ಟುಕೊಟ್ಟರೆ ಅಂಥಹವರಿಗೆ ಗೋಮಾಳದಲ್ಲಿ ಒಂದಕ್ಕೆ ಎರಡರಷ್ಟು ಜಮೀನು ಕೊಡುವ ಬಗ್ಗೆ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ ? ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪರಿಶೀಲನೆ ಮಾಡುತ್ತೇನೆ ಸ್ವಾಮಿ.

ಸಾಗರ ತಾಲ್ಲೂಕಿನಲ್ಲಿ ಕೈಗಾರಿಕಾ ಷೆಡ್ಡುಗಳ ನಿರ್ಮಾಣ ಮತ್ತು ಅದರ ಅಸಮರ್ಪಕ ವ್ಯವಸ್ಥೆ

೮೯೧( ) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಾಗರ ತಾಲ್ಲೂಕಿನಲ್ಲಿ ಯಾವ ಯಾವ ಯೋಜನೆಯನ್ವಯ ಕೈಗಾರಿಕಾ ಷೆಡ್ಡುಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ?

ಆ) ಸದರಿ ಕಾಮಗಾರಿಗಳನ್ನು ಯಾವ ವರ್ಷ ಪ್ರಾರಂಭಿಸಲಾಯಿತು ಮತ್ತು ಈಗ ಯಾವ ಹಂತ ದಲ್ಲಿದೆ? (ವಾರ್ಷಿಕ ಪ್ರಗತಿ ವಿವರ ಒದಗಿಸುವುದು)

ಇ) ಇನ್ನೂ ಹೆಚ್ಚು ಷೆಡ್ಡುಗಳ ಬಗ್ಗೆ ಕೋರಿಕೆಗಳೇನಾದರೂ ಇವೆಯೆ ?

ಈ) ಷೆಡ್ಡುಗಳ ವಿಲೇವಾರಿಗೆ ಈಗಿರುವ ಕ್ರಮವೇನು, ಹಾಗೂ ಇದು ತೃಪ್ತಿಕರವಾಗಿದೆಯೆ ?

ಉ) ಕೈಗಾರಿಕಾ ಎಸ್ಟೇಟ್‌ನಲ್ಲಿ ನೀರು ಸರಬರಾಜು ರಸ್ತೆ ಮತ್ತು ಶೌಚಗಾರ ವ್ಯವಸ್ಥೆ ಸರಿಯಿಲ್ಲ ದಿರುವುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೆ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಸಾಗರ ತಾಲ್ಲೂಕಿನಲ್ಲಿ ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆಯನ್ವಯ ಕೈಗಾರಿಕಾ ಷೆಡ್ಡುಗಳ ನಿರ್ಮಾಣ ಕೈಗೊಳ್ಳಲಾಗಿದೆ.

ಆ) ೧೯೮೧ನೇ ಅಕ್ಟೋಬರ್‌ನಲ್ಲಿ ೮ ಕೈಗಾರಿಕಾ ಷೆಡ್ಡುಗಳ ನಿರ್ಮಾಣವನ್ನು ತೆಗೆದುಕೊಳ್ಳಲಾಯಿತು. ೧೯೮೨ ಮತ್ತು ೧೯೮೩ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ೫ ಷೆಡ್ಡುಗಳನ್ನು ಅವಶ್ಯವಿರುವ ಉದ್ದಿಮೆದಾರರಿಗೆ ವಿತರಣೆ ಮಾಡಲಾಯಿತು. ೩ ಷೆಡ್ಡುಗಳು ಖಾಲಿ ಇವೆ. ಅವುಗಳನ್ನು ವಿತರಣೆ ಮಾಡುವಂತೆ ಜಿಲ್ಲಾ ಮಟ್ಟದ ಸಮಿತಿಯನ್ನು ಕೇಳಲಾಗಿದೆ.

ಇ) ಹೌದು. ಇವೆ.